**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 344/2013

ಪಿ. ಡಬ್ಲ್ಯು: 05
ಸಿ. ಡಬ್ಲ್ಯು: 15

ಸಾಕ್ಷಿದಾರರ ಹೆಸರು : ಆನಂದ
ತಂದೆ/ಪತಿಯ ಹೆಸರು : ತಮ್ಮೇಗೌಡ
ವಯಸ್ಸು : 32 ವರ್ಷ
ವೃತ್ತಿ : ಪೋಲೀಸ್ ಪೇದೆ
ವಾಸ : ಮಂಡ್ಯ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 25.01.2023
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಅರಕೆರೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ದಿಃ 26.12.2012 ರಿಂದ 2018 ವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15.08.2013 ರಂದು ನಾನು ಠಾಣೆಯಲ್ಲಿ ಹಗಲು ಕರ್ತವ್ಯದಲ್ಲಿದ್ದಾಗ ನಮ್ಮ ಠಾಣೆಯ ಪಿ.ಎಸ್.ಐ ರವರಿಗೆ ಬಂದ ಬಾತ್ಮಿಯಂತೆ ಗಾಮನಹಳ್ಳಿ ಗ್ರಾಮದ ಚೆನ್ನಪ್ಪ ಎಂಬುವವರ ಅಂಗಡಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಂದ ಮಾಹಿತಿಯಂತೆ ನನ್ನನ್ನು ಮತ್ತು ಪಿಸಿ 120, ಹೆಚ್.ಸಿ.98 ರವರಿಗೆ ಮಾಹಿತಿ ತಿಳಿಸಿ ನಮ್ಮ ಠಾಣೆಯ ಮುಂಭಾಗದಲ್ಲಿದ್ದ ಚನ್ನೇಗೌಡ, ಪ್ರಕಾಶ್ ರವರಿಗೂ ಸಹ ಮಾಹಿತಿ ತಿಳಿಸಿ ಪಂಚರಾಗಿ ಇರುವಂತೆ ಅವರನ್ನು ಕೇಳಿಕೊಂಡು ಅವರಿಗೆ ನೋಟೀಸ್ ನೀಡಿ ಠಾಣೆಯಿಂದ 04.45 ಗಂಟೆ ಸುಮಾರಿಗೆ ಕೆಎ-11-ಜಿ-250 ಇಲಾಖಾ ಜೀಪ್ ನಲ್ಲಿ ಹೊರಟು ಗಾಮನಹಳ್ಳಿ ಗ್ರಾಮಕ್ಕೆ 05.15 ಸಮಯಕ್ಕೆ ಹೋಗಿರುತ್ತೇವೆ.

ಗಾಮನಹಳ್ಳಿ ಗ್ರಾಮದ ಚೆನ್ನಪ್ಪ ಎಂಬುವವರ ಅಂಗಡಿ ಹತ್ತಿರ ಜೀಪ್ ನಿಲ್ಲಿಸಿ ನೋಡಲಾಗಿ ಅಲ್ಲಿ ಇಬ್ಬರು ಆಸಾಮಿಗಳು 2 ಬಾಟಲಿ ಮದ್ಯವನ್ನು ತೆಗೆದುಕೊಂಡು ಪ್ಲಾಸ್ಟಿಕ್ ಲೋಟದಲ್ಲಿ ಹಾಕಿ ಕುಡಿಯುತ್ತಾ ಕುಳಿತಿದ್ದು ನಮ್ಮ ಜೀಪ್ ನೋಡಿ ಓಡಿ ಹೋದರು. ಆಗ ನಾವು ಮತ್ತು ಪಿ.ಎಸ್.ಐ ರವರು ಜೀಪ್ ನಿಂದ ಇಳಿದು ಅಂಗಡಿ ಹತ್ತಿರ ಹೋಗಿ ಅಲ್ಲಿ ಇದ್ದ ಅರ್ಧ ತುಂಬಿದ ಮದ್ಯದ ಬಾಟಲಿ ಮತ್ತು ಲೋಟವನ್ನು ತೆಗೆದುಕೊಂಡು ಅಲ್ಲೇ

ಅಂಗಡಿಯಲ್ಲಿದ್ದ ಆಸಾಮಿಯನ್ನು ವಿಚಾರಣೆ ಮಾಡಿದ್ದು ಆತನ ಹೆಸರು ಚೆನ್ನಪ್ಪ ಎಂದು ಗೊತ್ತಾಯಿತು.

ಪಿ.ಎಸ್.ಐ ರವರು ಚೆನ್ನಪ್ಪ ನನ್ನು ನಿಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಯಾವುದೇ ಲೈಸನ್ಸ ಇಲ್ಲದೇ ಮದ್ಯ ಮಾರಾಟ ಮಾಡುತ್ತಿದ್ದೀರಿ ಎಂದು ವಿಚಾರಿಸಿ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮೇಲೆ ಇದ್ದ ಒಂದು ರಟ್ಟಿನ ಬಾಕ್ಸ ಅನ್ನು ತೆಗೆದು ನೋಡಿದಾಗ ಅದರಲ್ಲಿ 44 ಬಾಟಲು ಸೂಪರ್ ಜಾಕ್ ಫೈನ್ ಬ್ರಾಂದಿ ಎಂದು ಹೆಸರಿರುವ 180 ಎಂ.ಎಲ್ ಅಳತೆಯ, 37.79 ರೂಪಾಯಿ ಎಂದು ನಮೂದಿದ್ದ, ಅವುಗಳ ಮೇಲೆ ಬ್ಯಾಚ್ ಸಂಖ್ಯೆ ಮತ್ತು ಸೀಲ್ ಮಾಡಲಾಗ್ದಿ ನಂಬರ್ ಸಹ ಇರುವುದು ಕಂಡುಬಂದಿತ್ತು.

ಚೆನ್ನಪ್ಪನನ್ನು ಮದ್ಯ ಮಾರಾಟ ಮಾಡುವ ಸಲುವಾಗಿ ಲೈಸನ್ಸ ಇರುವ ಬಗ್ಗೆ ವಿಚಾರಣೆ ಮಾಡಿದ್ದು ಆತ ತನ್ನ ಹತ್ತಿರ ಯಾವುದೇ ಲೈಸನ್ಸ್ ಇಲ್ಲವೆಂದು ತಿಳಿಸಿರುತ್ತಾನೆ. ನಂತರ 05.30-06.15 ವರೆಗೆ ಮಹಜರ್ ಕ್ರಮ ಜರುಗಿಸಲಾಗಿದೆ. 06.25 ಸಮಯಕ್ಕೆ ಚೆನ್ನಪ್ಪನನ್ನು ಜೀಪ್ ನಲ್ಲಿ ಕೂರಿಸಿ ವಿಚಾರಣೆಗಾಗಿ ಠಾಣೆಗೆ ಕರೆದುಕೊಂಡು ಬರುವ ಕಾಲಕ್ಕೆ ಅಲ್ಲಿಯೇ ಇದ್ದ ಕೆಲವು ಜನ ಜೀಪ್ ಅನ್ನು ಅಡ್ಡಗಟ್ಟಿ ನೀವು ಚೆನ್ನಪ್ಪನನ್ನುಹಾಗೂ ಮದ್ಯವನ್ನು ಕೆಳಗೆ ಇಳಿಸಿ ಹಾಗೂ ನೀವು ನಮ್ಮ ಗ್ರಾಮದಲ್ಲಿ ಕೇಸು ದಾಖಲು ಮಾಡಬೇಡಿ ಬೇರೆ ಊರಿಗೆ ಹೋಗಿ ಕೇಸು ದಾಖಲಿಸಿ ಎಂದು ತಿಳಿಸಿ ಅವಾಚ್ಯ ಶಬ್ದಗಳಿಂದ ಬೈದರು.

ನಂತರ ನಮ್ಮ ಪಿ.ಎಸ್.ಐ ರವರು ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ತಪ್ಪು ಚೆನ್ನಪ್ಪನ ಮೇಲೆ ಕ್ರಮ ಜರುಗಿಸಲು ಅವಕಾಶ ಮಾಡಿಕೊಂಡು ಎಂದು ಅಲ್ಲಿದ್ದ ಜನಗಳಿಗೆ ಕೇಳಿದ್ದನ್ನು ಕೇಳದೇ ಅವರುಗಳು ನಮ್ಮ ಇಲಾಖಾ ಜೀಪಿನ ಚಾಲಕನಾದ ಶ್ರೀನಿವಾಸನನ್ನು ಜೀಪ್ ನಿಂದ ಕೆಳಗೆ ಎಳೆದು ಆತನ ಕತ್ತಿಗೆ ಹೊಡೆದು ತಳ್ಳಿರುತ್ತಾರೆ. ನಂತರ ಚೆನ್ನಪ್ಪನನ್ನು ಹಾಗೂ ನಮ್ಮನ್ನು ಕೆಳಗೆ ಇಳಿಸಿದ್ದು ಪಿ.ಎಸ್.ಐ ರವರ ಕತ್ತಿನ ಪಟ್ಟಿ ಹಿಡಿದುಎಳೆದಾಡಿರುತ್ತಾರೆ.

ನಂತರ ಚೆನ್ನಪ್ಪ ಅಂಗಡಿಯಲ್ಲಿದ್ದ ತೂಕದ ಬಟ್ಟನ್ನು ತೆಗೆದುಕೊಂಡು ನಮ್ಮ ಪೋಲೀಸ್ ಸಿಬ್ಬಂದಿಯಾದ ಚೌಡಪ್ಪನವರ ಎಡಹಣೆಯ ಮೇಲೆ ಹೊಡೆದು ರಕ್ತ ಗಾಯ ಪಡಿಸಿರುತ್ತಾರೆ. ಮತ್ತೊಬ್ಬ ಆಸಾಮಿ ನಮ್ಮ ಪೋಲೀಸ್ ಸಿಬ್ಬಂದಿಯಾದ ರವಿ ರವರ ಮುಖಕ್ಕೆ ಕೈಗಳಿಂದ ಹೊಡೆದು ಆತ ಧರಿಸಿದ್ದ ಬಟ್ಟೆಯನ್ನು ಹರಿದು ಹಾಕಿರುತ್ತಾರೆ. ನಂತರ ಅಲ್ಲಿದ್ದ ಇಬ್ಬರು ಆಸಾಮಿಗಳು ನಾನು ಧರಿಸಿದ್ದ ಸಮವಸ್ತ್ರವನ್ನು ಹರಿದು ಹಾಕಿ ತಮ್ಮ ಕೈಗಳಿಂದ ನನ್ನ ಮುಖ ಹಾಗೂ ಕತ್ತಿಗೆ ಹೊಡೆದಿರುತ್ತಾರೆ.

ನಂತರ ಅಲ್ಲಿದ್ದ ಜನರು ಪೋಲೀಸರು ಹಾಗೂ ಜೀಪ್ ಅನ್ನು ಇಲ್ಲಿಯೇ ಬೆಂಕಿ ಹಾಕಿ ಸುಟ್ಟು ಹಾಕೋಣ ಎಂದು ಮಾತನಾಡುತ್ತಿದ್ದಾಗ ನಾವು ಜೀಪ್ ಹತ್ತಿದ್ದು ಜೀಪ್ ಚಾಲಕ ಜೀಪ್ ಅನ್ನು ಸ್ಟಾರ್ಟ್ ಮಾಡಿ ಅಲ್ಲಿಂದ ನಾವು ಅರಕೆರೆ ಪೋಲೀಸ್ ಠಾಣೆಗೆ ವಾಪಸ್ಸು ಬಂದಿರುತ್ತೇವೆ.

ನನ್ನ ಮೇಲೆ ಹಲ್ಲೆ ಮಾಡಿ ಸಮವಸ್ತ್ರ ಹರಿದು ಹಾಕಿದ್ದ ವ್ಯಕ್ತಿಗಳ ಹೆಸರು ಮಹೇಶ್ ಬಿನ್ ಚಾಟಿ ಮಾಯಿಗಯ್ಯ, ಮಹೇಶ್ ಬಿನ್ ಶಿವಸ್ವಾಮಿ ಆಗಿರುತ್ತದೆ. ಪಿ.ಎಸ್.ಐ ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿದ ವ್ಯಕ್ತಿಯ ಹೆಸರು ಮುತ್ತುರಾಜ್ ಆಗಿರುತ್ತದೆ. ನಮ್ಮ ಪೋಲೀಸ್ ಸಿಬ್ಬಂದಿ ರವಿಯವರಿಗೆ ಹಲ್ಲೆ ಮಾಡಿದ್ದ ವ್ಯಕ್ತಿಯ ಹೆಸರು ಪುಟ್ಟಸ್ವಾಮಿ, ಶ್ರೀನಿವಾಸ ಮೇಲೆ ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಕೃಷ್ಣ ಆಗಿರುತ್ತದೆ. ನಮ್ಮ ಜೀಪ್ ಹಾಗೂ ನಮ್ಮನ್ನು ಸುಟ್ಟು ಹಾಕಬೇಕೆಂದು ಎಂದು ಹೇಳಿದ ವ್ಯಕ್ತಿಯ ಹೆಸರು ರಘು ರಾಜೇರಸ್ , ರಮೇಶ್ ಮತ್ತು ಮಾದೇಶ್ ಆಗಿರುತ್ತದೆ. ಸದರಿ ವ್ಯಕ್ತಿಗಳ ಹೆಸರುಗಳು ನನಗೆ ಬಾತ್ಮಿದಾರರ ಕಡೆಯಿಂದ ಗೊತ್ತಾಗಿರುತ್ತದೆ.

ಮಹಜರ್ ಮಾಡುವ ಕಾಲಕ್ಕೆ ಅಲ್ಲಿ ದೊರೆತ ವಸ್ತುಗಳ ಪೈಕಿ ರಾಸಯನಿಕ ಪರೀಕ್ಷೆಗಾಗಿ ಕಳುಹಿಸುವ ಸಂಬಂಧ 2 ಅರ್ಧ ತುಂಬಿದ್ದ ಮದ್ಯದ ಬಾಟಲಿಗಳು, 2 ಪೂರ್ತಿ ತುಂಬಿದ್ದ ಮದ್ಯದ ಬಾಟಲಿಗಳನ್ನು ಬಿಳಿ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ಹೊಲೆದು ಎಸ್ ಎಂಬ ಸೀಲ್ ಹಾಕಿರುತ್ತಾರೆ. ಅಲ್ಲಿ ದೊರೆತ ಒಟ್ಟು ಮದ್ಯ 7,920 ಎಂ.ಎಲ್ ಆಗಿತ್ತು ಅದರ ಒಟ್ಟು ಬೆಲೆ ರೂ.1,665/- ಆಗಿತ್ತು.

ನಾನು ಮಹಜರ್ ಗೆ ಸಹಿ ಮಾಡಿದ್ದೇನೆ. ಸಾಕ್ಷಿಯು ಮಹಜರ್ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1-ಇ ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಮಹೇಶ್ ಬಿನ್ ಚಾಟಿ ಮಾಯಿಗಯ್ಯ, ಮಹೇಶ್ ಬಿನ್ ಶಿವಸ್ವಾಮಿ, ಚೆನ್ನಪ್ಪ, ರಘು ರಾಜೇರಸ್, ಮುತ್ತುರಾಜ, ಪುಟ್ಟಸ್ವಾಮಿ ಹಾಗೂ ಮಾದೇಶ್ ರವರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಕಬ್ಬಿಣದ ತೂಕದ ಬಟ್ಟನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾಲು.2 ಎಂದು ಗುರುತಿಸಲಾಗಿದೆ. ನಾನು ಧರಿಸಿದ್ದ ಸಮವಸ್ತ್ರ ಮತ್ತು ನಮ್ಮ ಸಿಬ್ಬಂದಿ ರವಿ ಧರಿಸಿದ್ದ ಶರ್ಟ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಸದರಿ ಸಮವಸ್ತ್ರವನ್ನು ನಿಪಿ.5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮದ್ಯ ತುಂಬಿದ ಬಾಟಲಿಗಳು, 2 ಪ್ಲಾಸ್ಟಿಕ್ ಲೋಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾಲು.1 ಮತ್ತು 3 ಎಂದು

ಗುರುತಿಸಲಾಗಿದೆ. ನಾನು ಘಟನೆ ಸಂಬಂಧ ನನ್ನ ಹೇಳಿಕೆಯನ್ನು ತನಿಖಾಧಿಕಾರಿಯವರಿಗೆ ನೀಡಿದ್ದೇನೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.